ಜೆಎಸ್ಎಸ್ ಮಹಾವಿದ್ಯಾಪೀಠ
ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಪ್ರಥಮ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
ಊಟಿರಸ್ತೆ, ಮೈಸೂರು-೫೭೦ ೦೨೫
☎ 0821-2548236 & 2548380 Fax: 0821-2548238 E-mail: jssautonomous@gmail.com

ದಿನಾಂಕ: 15.08.2015

<u>ಪ್ರಕಟಣೆ ಕೃಪೆಗಾಗಿ</u>

# ೬೯ ನೇಸ್ವಾತಂತ್ರ್ಯ ದಿನಾಚರಣೆ ಆಚರಣೆ

ಮೈಸೂರು, ಆ.15: ಜೆಎಸ್ಎಸ್ ಕಾಲೇಜು, ಊಟಿ ರಸ್ತೆ ಮೈಸೂರಿನಲ್ಲಿ 69 ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸಡಗರ, ಸಂಭ್ರಮದಿಂದ ಆಚರಿಸಲಾಯಿತು. ಪ್ರೊ. ಬಿ.ವಿ. ಸಾಂಬಶಿವಯ್ಯ, ಮುಖ್ಯ ಕಾರ್ಯನಿವಾಹಕರು, ಜೆಎಸ್ಎಸ್ ಕಾಲೇಜು, ಮೈಸೂರುರವರು ಧ್ವಜಾರೋಹಣ ಮಾಡಿದರು. ಸ್ಕೌಟ್ ಮತ್ತು ಎನ್‌ಸಿಸಿ ಕೆಡೆಟ್‌ಗಳ ಜೊತೆಗೆ ಉಪಸ್ಥಿತರಿದ್ದ ಗಣ್ಯರು, ಉಪನ್ಯಾಸಕರು, ವಿದ್ಯಾರ್ಥಿನಿಯರು ರಾಷ್ಟ್ರಗೀತೆ ಹಾಡಿ ನಮನ ಸಲ್ಲಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕನ್ನಡಪ್ರಭ ದಿನಪತ್ರಿಕೆಯ ಸಹಾಯಕ ಸಂಪಾದಕರಾದ ಶ್ರೀ ಅಂಶಿ ಪ್ರಸನ್ನಕುಮಾರ್ ಇವರು ಭಾರತವು ವಿಶ್ವದಲ್ಲೇ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಇದು ಮಹಾತ್ಮ ಗಾಂಧಿ ಮೊದಲಾದ ಮಹಾನ್ ನಾಯಕರ ತ್ಯಾಗ, ಬಲಿದಾನದಿಂದ ದೊರೆತಿದೆ. ಇದನ್ನು ಜಾತಿ, ಧರ್ಮ, ಮತ ಭೇದವೆಣಿಸದೆ ಎಲ್ಲರೂ ಒಗ್ಗಟನ್ನು ಪ್ರದರ್ಶಿಸುವ ಮೂಲಕ ಪ್ರಗತಿಯತ್ತ ಸಾಗಬೇಕು ಎಂದು ಕರೆನೀಡಿದರು. ಸ್ವಾತಂತ್ರೋತ್ಸವ ಸಂಗ್ರಾಮಕ್ಕೆ ಮೈಸೂರಿನ ಕೊಡುಗೆಯನ್ನು ಕುರಿತು ಮಾತಾನಾಡುತ್ತಾ, ಸುಬ್ಬರಾಯನ ಕೆರೆಯಿಂದ ಆರಂಭವಾದ ಸ್ವಾತಂತ್ರಹೋರಾಟ, ಕಾನೂನು ಭಂಗ ಚಳಿವಳಿ. ಭಾರತ ಬಿಟ್ಟು ತೊಲಗಿ ಮುಂತಾದ ಚಳವಳಿಗಳಿಗೆ ಮೈಸೂರಿನ ಕೊಡುಗೆಯನ್ನು ಸ್ಮರಿಸಿದರು. ಈ ಚಳವಳಿಗಳು ಮಹಾತ್ಮ ಗಾಂಧೀಜಿಯವರು ತಗಡೂರು ಮತ್ತು ಬದನವಾಳಿಗೆ ಭೇಟಿನೀಡಿದ ನಂತರ ತೀವ್ರಗತಿಯನ್ನು ಪಡೆಯಿತು ಎಂದು ತಿಳಿಸಿದರು. ಈ ನಿಟ್ಟಿನಲ್ಲಿ ಬಿ ನಾರಾಯಣಸ್ವಾಮಿ, ಹೆಚ್ ವಿ ಸುಬ್ಬರಾಮಯ್ಯ, ಸುಬ್ಬರಾವ್ ಉಪಾಧ್ಯ ಅವರ ಕೊಡುಗೆ ಅನನ್ಯ ಎಂದು ತಿಳಿಸಿದರು. ಎಚ್ ವೈ ಶಾರದಾ ಪ್ರಸಾದ್, ಎಂ ವಿ ಕೃಷ್ಣಪ್ಪ, ಹೆಚ್ ಕೆ ಕುಮಾರಸ್ವಾಮಿ, ಖಾದ್ರಿ ಶಾಮಣ್ಣ, ಕೆ ಎಸ್ ಸೀತಾರಾಎಮ್ ಅಯ್ಯಂಗಾರ್, ಎಂ ವಿ ಆನಂದರಾವ್, ಅಬ್ದುಲ್ ಗಫರ್ ಇನ್ನು ಮುಂತಾದವರು ಪತ್ರಿಕೋದ್ಯಮ ಕ್ಷೇತ್ರದಿಂದ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಕೊಡುಗೆ ನೀಡಿರುವುದನ್ನು ಸ್ಮರಿಸಿದರು. ಈ ಸಂಧರ್ಭದಲ್ಲಿಯೇ ಡಾ ಎಪಿಜೆ ಅಬ್ದುಲ್ ಕಲಾಂರವರು ಸುತ್ತೂರು ಶ್ರೀ ಮಠದೊಂದಿಗಿನ ನಿಕಟ ಭಾಂಧವ್ಯವನ್ನು ಸ್ಮರಿಸುತ್ತಾ ಕಲಾಂರವರ ಆದರ್ಶ ಜೀವನವನ್ನು ಅನುಸರಿಸಬೇಕೆಂದು ತಿಳಿಹೇಳಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಎಂ ಮಹದೇವಪ್ಪನವರು, ಜೆಎಸ್ಎಸ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್ ಸೋಮಶೇಖರ ರವರು ಉಪಸ್ಥಿತರಿದ್ದರು. ಸ್ನಾತಕೋತ್ತರ ಸಮಾಜಕಾರ್ಯ ವಿಭಾಗದ ಮುಖ್ಯಸ್ಥರಾದ ಡಾ. ಎಂ ಪಿ ಸೋಮಶೇಖರ್ ರವರು ಸ್ವಾಗತಿಸಿದರು. ಶೈಕ್ಷಣಿಕ ಡೀನ್ ಡಾ. ಕೆ ವಿ ಸುರೇಶ್ ರವರು ವಂದಿಸಿದರು. ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಎಂ ಎಸ್ ವೆಂಕಟರಾವ್ ಕಾರ್ಯಕ್ರಮವನ್ನು ನಿರೂಪಿಸಿದರು.

(ಪ್ರೊ ಎಂ ಮಹದೇವಪ್ಪ)
ಪ್ರಾಂಶುಪಾಲರು
ಜೆ.ಎಸ್.ಎಸ್.ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇ.
(ಸ್ವಾಯತ್ತ)
ಊಟಿ ರಸ್ತೆ, ಮೈಸೂರು-570025

ಗೆ
ಸಂಪಾದಕರು / ವರದಿಗಾರರು

_ _ _ _ _ _ _ _ _ _ _ _ _ _ _ _

_ _ _ _ _ _ _ _ _ _ _ _ _ _ _ _